Reg. No. | | | | | | | | | |

Shri Dharmasthala Manjunatheshwara
College of Business Management Library
MANGALORE - 575 003

**BBMKAL 153**

## Credit Based II Semester B.B.M. Examination, April/May 2015
## (Semester Scheme) (2013-14 Batch Onwards)
## KANNADA
### ಕನ್ನಡ ಭಾಷಾ ಪತ್ರಿಕೆ – II
### (2013-2014 ಬ್ಯಾಚ್ ಮತ್ತು ನಂತರದವರಿಗಾಗಿ)

Time : 3 Hours                                                                                Max. Marks : 80

**ಭಾಗ – 1 (ಕಾವ್ಯ) (35 ಅಂಕಗಳು)**

I. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ : **(1×8=8)**

1) 'ನೆಲಕಿರಿವೆನೆಂದು ಬಗೆದಿರೆ ಛಲಕಿರಿವೆಂ' ಎಂಬ ಮೌಲ್ಯಕ್ಕಾಗಿ ತುಡಿಯುವ ದುರ್ಯೋಧನನ ಉದಾತ್ತ ಪಾತ್ರವನ್ನು ಪರಿಚಯಿಸಿರಿ.

2) ಬದಲಾವಣೆ ಬದುಕಿನ ನಿರಂತರತೆಯ ಸಂಕೇತ ಎಂಬುದನ್ನು ಜಿ. ಎಸ್.ಎನ್. ರವರ ಅಸ್ತಮಾನ ಹೇಗೆ ನಿರೂಪಿಸಿದೆ ? ವಿವರಿಸಿರಿ.

ಆ) ಕೆಳಗಿನ **ಒಂದು** ಪ್ರಶ್ನೆಗೆ ಉತ್ತರಿಸಿರಿ (ಸಂಕ್ಷಿಪ್ತವಾಗಿ) : **(1×5=5)**

1) ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿ ಕಂಡುಬರುವ ಕಾಯಕದ ಮತ್ತು ಶರಣರ ಮಹಿಮೆಯನ್ನು ವಿವರಿಸಿರಿ.

2) 'ಸ್ತ್ರೀ ಸಂವೇದನೆ' ಅಡುಗೆ ಮನೆಯ ಹುಡುಗಿ ಕವನದಲ್ಲಿ ಹೇಗೆ ವ್ಯಕ್ತಗೊಂಡಿದೆ ? ವಿವರಿಸಿರಿ.

ಇ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2×3=6)**

1) ಗದಾಯುದ್ಧದಲ್ಲಿ ಮರುಳುಗಳ ಪ್ರಸಂಗ

2) ಸುಬ್ರಾಯ ಚೊಕ್ಕಾಡಿ

3) ಅಮುಗೆ ರಾಯಮ್ಮ.

II. ಅ) **ಒಂದು** ಪದ್ಯದ ಸಂದರ್ಭ ಸೂಚಿಸಿ ಮಹತ್ತ್ವವನ್ನು ವಿವೇಚಿಸಿರಿ : **(1×5=5)**

1) ಅಸಮಬಲ ಭವದ್ವಿಕ್ರಮ
ಮಸಂಭವಂ ಪೆರರ್ಗೆ ನಿನ್ನನಾನಿನಿತಂ ಪ್ರಾ
ರ್ಥಿಸುವೆ ನಭಿಮನ್ಯು ನಿಜಸಾ
ಹಸೈಕದೇಶಾನು ಮರಣಮೆಮಗಕ್ಕೆ ಗಡಾ

2) ಸೃಷ್ಟಿಪೂರ್ವದ ಅಥವಾ ಪ್ರಳಯ ದಾನಂತರದ
ವಿರಾಮದ ಕ್ಷಣವೊ, ಬಂದನೊಬ್ಬನು ವ್ಯಾಧ
ಬೇಟೆಯನ್ನರಸುತ್ತ, ಕಪ್ಪು ಮೈ ನೆರಳನುದ್ದುದ್ದ
ಚೆಲ್ಲುತ್ತ, ದಟ್ಟ ಹಸುರಿನ ಮೇಲೆ ಶ್ರೀ ಹರಿಪಾದ.

P.T.O.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×3=6)**

1) ಭೀಮಕೋಪದೆ ನಿನಗೂರು ಭಂಗ ಭಯ ಮಾಗದೆ ಪೋಕುಮೆ.

2) ತಾಯಿ ರಕ್ಕಸಿಯಾದಂತೆ ಕಾಯವಿಕಾರವು.

3) ಅಭಾವವಿದ್ದರೆ ವೈರಾಗ್ಯ ತಾನೆ ?

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(5×1=5)**

1) ಫಣಿರಾಜ ಕೇತನ ಯಾರು ?

2) ಅಮಲೇಶ್ವರ ಯಾರ ಅಂಕಿತನಾಮ ?

3) ಶ್ರೀ ಕೃಷ್ಣನು ಪಾರಿಜಾತವನ್ನು ಯಾರಿಗಾಗಿ ಭೂಲೋಕಕ್ಕೆ ತಂದನು ?

4) ಅಕ್ಕಮಹಾದೇವಿಯ ಹುಟ್ಟೂರು ಯಾವುದು ?

5) ನಾಗವ್ವಳ ಗಂಡನ ಹೆಸರೇನು ?

## ಭಾಗ – 2 (ಗದ್ಯ) (25 ಅಂಕಗಳು)

IV. ಅ) **ಒಂದಕ್ಕೆ** ಉತ್ತರಿಸಿರಿ : **(1×8=8)**

1) ಬಡತನ ಅಭಿವೃದ್ಧಿಯ ಮಾಧ್ಯಮ ಈ ಲೇಖನದಲ್ಲಿ ಲೇಖಕರು ಭಾರತದ ಅಭಿವೃದ್ಧಿ ಮೀಮಾಂಸೆಯನ್ನು ಹೇಗೆ ಪರಿಚಯಿಸಿದ್ದಾರೆ ? ವಿವರಿಸಿರಿ.

2) ಮುದ್ದು ಬೆಕ್ಕುಗಳ ಮೋಹಕ ಲೋಕದ ಲೇಖನದಲ್ಲಿ ಹೆಗಡೆಯವರು ಮಾರ್ಜಾಲ ಪ್ರಪಂಚದ ಅರಿವನ್ನು ಹೇಗೆ ಪರಿಚಯಿಸಿದ್ದಾರೆ ? ವಿವರಿಸಿರಿ.

ಆ) **ಒಂದಕ್ಕೆ** ಉತ್ತರಿಸಿರಿ : **(1×8=8)**

1) ಜೇಡನ ಬಲೆ ಮೂಲಕ ಎಚ್ಚೆಸ್ಕೆಯವರು ಹೊಸ ಜೀವನ ದರ್ಶನದ ಬೆಳಕನ್ನು ಹೇಗೆ ನೀಡಿದ್ದಾರೆ ವಿವರಿಸಿರಿ.

2) ನೇಮಿಚಂದ್ರರು ಲೇಖನದಲ್ಲಿ ನೀರಿನ ಪ್ರಭೇದ ಹಾಗೂ ಅದರ ಪ್ರಯೋಜನವನ್ನು ಹೇಗೆ ವಿವೇಚಿಸಿದ್ದಾರೆ ? ವಿವರಿಸಿರಿ.

V. **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×5=5)**

1) ಬೆಕ್ಕಿನ ಸೂಕ್ಷ್ಮತೆ, ಚುರುಕು, ಆಪ್ತತೆಯನ್ನು ಸಂಗ್ರಹಿಸಿ ಬರೆಯಿರಿ.

2) 'ದಿನಗೂಲಿಗೆ ದುಡಿದವಳ ಕೋಟಿ ಕೋಟಿ' ಯ ಹಿಂದಿನ ಪರಿಶ್ರಮವನ್ನು ಪರಿಚಯಿಸಿರಿ.

VI. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿರಿ : **(4×1=4)**

1) ಕಲ್ಪನಾರ ಕಂಪನಿಯ ಸಿಇಓ ಯಾರು ?

2) ಬಡತನ ಅಭಿವೃದ್ಧಿ ಮಾಧ್ಯಮದ ಮೂಲ ಲೇಖಕರು ಯಾರು ?

3) ಲೇಖಕಿ ನೇಮಿಚಂದ್ರ ಬರೆದ ಲೇಖನದ ಹೆಸರೇನು ?

4) ಬೆಕ್ಕಿನ ಕಣ್ಣಿನ ಕುರಿತು ಅಧ್ಯಯನ ನಡೆಸಿದ ವಿಶ್ವವಿದ್ಯಾಲಯ ಯಾವುದು ?

Shri Dharmasthala Manjunatheshwara
College of Business Management Library
MANGALORE - 575 003

**ಭಾಗ – 3 (ನಾಟಕ) (20 ಅಂಕಗಳು)**

VII. ಅ) **ಒಂದಕ್ಕೆ** ಮಾತ್ರ ಉತ್ತರಿಸಿರಿ : **(1×8=8)**

1) ದುರ್ಯೋಧನನ ವ್ಯಕ್ತಿತ್ವಕ್ಕೊಂದು ಹೊಸ ಬೆಳಕನ್ನು 'ಶ್ಮಶಾನ ಕುರುಕ್ಷೇತ್ರಂ' ನಾಟಕದಲ್ಲಿ ಕುವೆಂಪುರವರು ಹೇಗೆ ನೀಡಿದ್ದಾರೆ ?

2) ವಿನಾಶದ ಗರ್ಭದಲ್ಲಿಯೇ ವಿನೂತನ ಸೃಷ್ಟಿಯ ಬೀಜವೂ ಹುದುಗಿದೆ ಎಂಬುದನ್ನು 'ಶ್ಮಶಾನ ಕುರುಕ್ಷೇತ್ರಂ' ನಾಟಕ ಹೇಗೆ ವಿವೇಚಿಸಿದೆ ? ವಿವರಿಸಿರಿ.

ಆ) **ಒಂದಕ್ಕೆ** ಉತ್ತರಿಸಿರಿ : **(1×6=6)**

1) ಧೃತರಾಷ್ಟ್ರ ಹಾಗೂ ಗಾಂಧಾರಿಯರು ದುರ್ಯೋಧನನ ಹುಡುಕಾಟಕ್ಕಾಗಿ ಸಂಜಯನೊಂದಿಗೆ ಬರುವ ಸನ್ನಿವೇಶವನ್ನು ಚಿತ್ರಿಸಿರಿ.

2) ನಾಟಕದಲ್ಲಿ ಮೂಡಿಬಂದ ಭೀಮಸೇನನ ಪ್ರಾತವನ್ನು ಚಿತ್ರಿಸಿರಿ.

VIII. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿರಿ : **(2×2=4)**

1) ಕರ್ಣನನ್ ಎನ್ನೊಡನೆ ಚಿತೆಯಲ್ಲಿ ಬೆಳ್ದಪೆಯಾ ?

2) ಪುಣ್ಯಾಗ್ನಿಗಾಹುತಿಯಾದ ಪಾಪದ ಬೆಳೆಸು.

3) ಕೈತವದ ಶಿಕ್ಷಾಗುರುವಲ್ತೆ ಆತನ್.

IX. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದೊಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ : **(2×1=2)**

1) ಹೊಸಗನ್ನಡದ ಮೊದಲ ಮಹಾಕಾವ್ಯ ಯಾವುದು ?

2) ಭೀಮಸೇನನ ಮಗನ ಹೆಸರೇನು ?

---